**ಪ್ರಮಾಣೀಕರಿಸಲಾದ ದಿನಾಂಕಃ– 10.07.2026.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್ ವಕೀಲರಿಂದಃ–**

ಆರೋಪಿ 2018 ರಿಂದ ನಮ್ಮ ಮನೆಯಲ್ಲಿ Ertiga ಕಾರನ್ನು ಚಾಲಕನಾಗಿ ಚಾಲನೆ ಮಾಡಿಕೊಂಡಿದ್ದ. ನಮಗೆ ಬೇಕಾದಾಗ ಮಾತ್ರ ಚಾಲಕನಾಗಿ ಬರುತ್ತಿದ್ದ. ತಿಂಗಳಿಗೆ ರೂ. 20 ಸಾವಿರ ಸಂಬಳ ಕೊಡುತ್ತಿದ್ದೆವು. ಸಂಬಳ ಕೊಟ್ಟಿರುವ ಬಗ್ಗೆ ದಾಖಲೆ ಇಲ್ಲ, ಹಣವನ್ನು ನಗದಾಗಿ ಕೊಡುತ್ತಿದ್ದೆವು. ಚಾಲಕನ ಚಾಲನ ಪರವಾನಗಿಯನ್ನು ಪಡೆದಿರಲಿಲ್ಲ. ನನ್ನ ಹಿರಿಯ ಮಗಳನ್ನು ದೊಡ್ಡ ಕಮ್ಮರಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದೆವು. ನನ್ನ ಅಳಿಯ ರೈತನಾಗಿದ್ದರು. ಚಾಮರಾಜನಗರದಲ್ಲಿ ಯಾರು ಸಂಬಂಧಿಕರಿಲ್ಲ. 2023 ರಲ್ಲಿ ನಗದಾಗಿ ಆರೋಪಿ ಸಾಲ ಪಡೆದ ಹಣ ಕೊಟ್ಟಾಗ ಯಾರು ಇರಲಿಲ್ಲ. ಜೂನ್ 2023 ರವರೆಗೂ ಆರೋಪಿ ಕೆಲಸಕ್ಕೆ ಬರುತ್ತಿದ್ದ. ನಂತರ 2 ತಿಂಗಳು ಬಂದ, ಆಮೇಲೆ ಚಾಲಕನಾಗಿ ಬರುವುದು ಬೇಡ ಎಂದು ಹೇಳಿದ್ದೆವು. ಆಗಾಗ ಮನೆಗೆ ಬೇರೆ ಕೆಲಸಗಳಿಗೆ ಅಂದರೆ ಆಳುಗಳನ್ನು ಕರೆದುಕೊಂಡು ಬರುವುದನ್ನು ಮಾಡುತ್ತಿದ್ದ. ಜೀಪ್ ವಾಹನದಲ್ಲಿ 2024 ರವರೆಗೂ ಬರುತ್ತಿದ್ದ. 2022 ರಲ್ಲಿ ಅಳಿಯ, ಮಗಳು ಮತ್ತು ಮೊಮ್ಮಕ್ಕಳು ನಮ್ಮ ಮನೆಯಲ್ಲೇ ಇದ್ದು ಮಗಳಿಗೆ ಹುಷಾರಿರಲಿಲ್ಲ. ಆಸ್ಪತ್ರೆಗೆ ಮಗಳು ನನ್ನ ಅಳಿಯ ಮತ್ತು ಆರೋಪಿ ಜೊತೆ ಮಂಗಳೂರಿನ ಆಸ್ಪತ್ರೆಗೆ ಹೋಗುತ್ತಿದ್ದರು. ಮೈಸೂರಿನ ಕಾವೇರಿ ಆಸ್ಪತ್ರೆಗೆ ಹೋಗುವಾಗಲೂ ಆರೋಪಿಯೇ ಚಾಲಕನಾಗಿದ್ದ. ನನ್ನ ಮಗಳು ಜೂನ್ 2022 ರಲ್ಲಿ ತೀರಿಕೊಂಡಿರುತ್ತಾಳೆ. ದಿ. 26.06.2022 ರಂದು ಅಳಿಯ ತೀರಿಕೊಂಡಿರುತ್ತಾನೆ.

ಆರೋಪಿ ನನ್ನಿಂದ ಹಣ ಪಡೆಯುವಾಗ 2 ಲಕ್ಷದ ತಲಾ 3 ಚೆಕ್ ಕೊಟ್ಟಿದ್ದ ಮತ್ತೇ 2 ಖಾಲಿ ಚೆಕ್ ಗಳನ್ನು ಕೊಟ್ಟಿರುತ್ತಾನೆ. ಒಟ್ಟು 12 ಲಕ್ಷ ಹಣ agreement ಮಾಡಿ ಹಣ ಕೊಟ್ಟಿರುತ್ತೇನೆ. ಇದರಲ್ಲಿ 6 ಲಕ್ಷ ಹಣ ತೀರಿಸಿದ, ಬರೆದುಕೊಟ್ಟ 3 ಚೆಕ್ ಗಳನ್ನು ವಾಪಸ್ ಕೊಟ್ಟಿರುತ್ತೇನೆ. ಆರೋಪಿ ಪರ ಎಂ ಎಸ್ ಕೆ ವಕೀಲರು ಅವರ

ಕಚೇರಿಯಲ್ಲಿ ಹೇಳಿದ 2 ಖಾಲಿ ಚೆಕ್ ಗಳನ್ನು ತುಂಬಿಸಿಕೊಟ್ಟರು. ನನ್ನ ಎದುರಿಗೆ ನಿ ಪಿ 1ಚೆಕ್ ಅನ್ನು ಬರೆದುಕೊಟ್ಟರು. ನಿ ಪಿ 1 ಚೆಕ್ ಅನ್ನು ಬರಹತಜ್ಞರಿಗೆ ಕಳುಹಿಸಲು ಯಾವುದೇ ತೊಂದರೆ ಇಲ್ಲ. ಕರಾರಿನಲ್ಲಿ ಖಾಲಿ ಚೆಕ್ ಕೊಟ್ಟಿದ್ದ ಬಗ್ಗೆ ಮತ್ತು ನನ್ನ ಮುಂದೆ ತುಂಬಿಸಿ ಕೊಟ್ಟ ಬಗ್ಗೆ ನಮೂದಿಸಿಲ್ಲ. ಆ ಕರಾರನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ, ಆದರೆ ಅದನ್ನು ನಿಶಾನೆಗೊಳಿಸಿಲ್ಲ. ಈ ಕರಾರಿನಲ್ಲಿ ಆರೋಪಿ ಕೊಟ್ಟ ಚೆಕ್ ಸಂಖ್ಯೆಗಳನ್ನು ಬರೆದಿಲ್ಲ. ಯಾವ ಕಾರಣಕ್ಕೆ ಆರೋಪಿಗೆ ಹಣದ ಅವಶ್ಯಕತೆ ಇತ್ತು ಎಂದು ಕರಾರಿನಲ್ಲಿ ಬರೆದಿಲ್ಲ. ನಾನು ಆರೋಪಿಯ 2ಚೆಕ್ ಗಳನ್ನು ಮಾತ್ರ ಬ್ಯಾಂಕಿನ ನಗದೀಕರಣಕ್ಕೆ ಹಾಕಿರುತ್ತೇನೆ.

ಸಾಕ್ಷಿಗೆ ಆರೋಪಿಯ ಚೆಕ್ ಸಂಖ್ಯೆ 323385 ಮತ್ತು 323386 ಚೆಕ್ ಗಳನ್ನು ನಗದೀಕರಣಕ್ಕೆ ಹಾಕಿದ್ದಾರೆಂದು ಕೇಳಿದ್ದು ಇಲ್ಲ ಎಂದು ಅಲ್ಲಗೆಳೆದಿರುತ್ತಾರೆ. ಸಾಕ್ಷಿ ಅದರ ಜೊತೆಗೆ ಇದ್ದ ಹಿಂಬರಹಗಳನ್ನು ನೋಡಿ ಒಪ್ಪಿದ್ದು ಈಹಿಂಬರದ ಜೊತೆಗೆ ಚೆಕ್ ಗಳನ್ನು ನಿ ಡಿ 1, 2 ಮತ್ತು ಹಿಂಬರಹಗಳನ್ನು ನಿ ಡಿ 3 ಮತ್ತು 4 ಎಂದು ಗುರುತಿಸಲಾಯಿತು. ರೂ. 6 ಲಕ್ಷ ಹಣ ಮೊದಲಿಗೆ ಹಣ ವಾಪಸ್ ಮಾಡಿದಾಗ ನಾನು ನಿ ಡಿ 1 ಮತ್ತು 2 ಚೆಕ್ ಗಳನ್ನು ವಾಪಸ್ ಆರೋಪಿಗೆ ಕೊಟ್ಟಿರುತ್ತೇನೆ. ಸಾಕ್ಷಿಗೆ ಆರೋಪಿಯ ಇನ್ನೊಂದು ಚೆಕ್ 353391 ಅನ್ನು ನೋಡಿ ಗುರುತಿಸಿದ್ದು ಈ ಚೆಕ್ ಅನ್ನು ಆರೋಪಿ ಕೊಟ್ಟಿರುತ್ತಾನೆ ನಗದೀಕರಣಕ್ಕೆ ಹಾಕಿದ್ದೆ ಈಗ ಹೇಳಿದ 6 ಲಕ್ಷ ಹಣ ವಾಪಸ್ ಕೊಟ್ಟಾಗ ಈ ಚೆಕ್ ಅನ್ನು ವಾಪಸ್ ಕೊಟ್ಟಿರುತ್ತೇನೆ. ಈ ಚೆಕ್ ಅನ್ನು ನಿ ಪಿ 5 ಎಂದು ಹಿಂಬರಹವನ್ನು ನಿ ಪಿ 6 ಎಂದು ಗುರುತಿಸಲಾಯಿತು. ಆರೋಪಿ ನನ್ನಿಂದ ಯಾವುದೇಹಣ ಪಡೆದಿಲ್ಲ, ನನ್ನ ಮಗಳು ತೀರಿಕೊಂಡ ನಂತರ ಆರೋಪಿಯ ಜೊತೆ ಇದ್ದ ಫೋಟೋ ಮತ್ತು ವಿಡಿಯೋವನ್ನು ಆಕೆಯ ಫೋನ್ ನಲ್ಲಿ ನಾನು ನೋಡಿದ್ದು, ಅದರಿಂದ ಆರೋಪಿಗೆ ಪೊಲೀಸರಿಗೆ ದೂರು ಕೊಡುತ್ತೇನೆಂದು ಬೆದರಿಸಿ ರೂ. 20 ಲಕ್ಷ ಹಣ ಬೇಡಿಕೆ ಇಟ್ಟಿದ್ದು, ಈ ಚೆಕ್ ಗಳನ್ನು ಆಗ ಪಡೆದಿದ್ದು ನಿ ಡಿ 1, 2 ಮತ್ತು 5 ಚೆಕ್ ಗಳನ್ನು, ನಿಪಿ 1 ಚೆಕ್ ಮತ್ತು C.C. 768/2025 ರಲ್ಲಿರುವ ಇನ್ನೊಂದು ನಿಪಿ 1

ಚೆಕ್ ಪಡೆದು, ಆರೋಪಿಯ ರೂ. 20 ಲಕ್ಷ ಕೊಟ್ಟ ನಂತರ ಈ ನಿ ಡಿ 1, 2 ಮತ್ತು 5 ಚೆಕ್ ಗಳನ್ನು ವಾಪಸ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಇನ್ನೊಂದು ಚೆಕ್ ತೋರಿಸಿದ್ದು ಆರೋಪಿ ಕೊಟ್ಟ ಈ ಚೆಕ್ ಅನ್ನು ನಗದೀಕರಣಕ್ಕೆ ಹಾಕಿದ್ದೆ ಎಂದರೆ ಸರಿಯಲ್ಲ, ಆದರೆ ಚೆಕ್ ನ ಹಿಂಬದಿ ಸಹಿಯನ್ನು ನೋಡಿ ಒಪ್ಪಿದರು, ಆದ್ದರಿಂದ ಅದನ್ನು ನಿ ಡಿ 7 ಎಂದು ಗುರುತಿಸಲಾಯಿತು. ಆರೋಪಿ ನಮ್ಮ ಕುಟುಂಬಸ್ಥರಿಗೆ ಗೊತ್ತು. ಆರೋಪಿಯ ತಂದೆ ತಾಯಿ ಗೊತ್ತು. ಅವರ ತಂದೆ ತಾಯಿ ಹೆಸರು ಗೊತ್ತಿಲ್ಲ, ಅವರ ಸಹೋದರ – ಸಹೋದರಿಯರು ಯಾರೆಂದು ಗೊತ್ತಿಲ್ಲ. ಆರೋಪಿಯಿಂದ ಹಣ ವಸೂಲಿ ಮಾಡಲು ಈ ಸುಳ್ಳು ಪ್ರಕರಣ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಒಂದು ಒಪ್ಪಂದ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ದೂರು ವಜಾ ಆಗಬೇಕು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ದೂರುದಾರರ ಪರ ಶ್ರೀ. ಡಿ.ಡಿ. ವಕೀಲರಿಂದ ಃ –**

ಮೇಲೆ ಹೇಳಿದ ಒಪ್ಪಂದ ಪತ್ರ ಕಡತದಲ್ಲಿದ್ದು ಆ ಕಾರಣಕ್ಕೆ ಮರು ವಿಚಾರಣೆ ಮಾಡಲು ಒಪ್ಪಿಗೆ ನೀಡಲಾಗಿದ್ದು ಆರೋಪಿ ಪರ ವಕೀಲರು ಮುದ್ರಾಂಕ ಶುಲ್ಕದ ಬಗ್ಗೆ ಪ್ರಶ್ನಿಸಿದ್ದು, ಕ್ರಿಮಿನಲ್ ಮೊಕದ್ದಮೆಯಲ್ಲಿ ಮುದ್ರಾಂಕ ಶುಲ್ಕದ ಮೇಲೆ ಆದೇಶ ಮಾಡಲಾಗುವುದಿಲ್ಲ ಎಂದು ತಿಳಿಸಿ ಸಾಕ್ಷಿ ಆದಾಖಲೆ ನೋಡಿ ಒಪ್ಪಿದ್ದು ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು. 2 ಪುಟಗಳಲ್ಲಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 6(ಎ) ಮತ್ತು 6(ಬಿ) ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ